# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ.ನಂ. 1989/2024**

ಫಿರ್ಯಾದಿಃ ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ನಿಯಮಿತ,
ಕಾರವಾರ.

ವಿರುದ್ಧ

ಆರೋಪಿತರುಃ

| | | |
|---|---|---|
| ಹೆಸರು | : | ಶ್ರೀಮತಿ ಶಿಲ್ಪ ಸುಭಾಷ ನಾಯ್ಕ, |
| ವಾಸ | : | ಸದಸ್ಯರು, ಶ್ರೀ ಕಾಮಾಕ್ಷಿ ಮಹಿಳಾ ಸ್ವ-ಸಹಾಯ ಸಂಘ, ನಾಗವಾಡ, ಬಾಂಡಿಶೀಟ್ಟಾ, ಕಾರವಾರ. |

## ಆಪಾದನೆ ಹೇಳಿಕೆ

ಪ್ರಸ್ತುತ ಪ್ರಕರಣದ ಆರೋಪಿತರಾದ ನೀವು ಶ್ರೀ ಕಾಮಾಕ್ಷಿ ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರಾಗಿದ್ದು, ನೀವು ಫಿರ್ಯಾದಿ ಸೊಸೈಟಿಯಲ್ಲಿ ಸಾಲದ ಅರ್ಜಿ ನೀಡಿದ್ದು, ಅದರಂತೆ ಫಿರ್ಯಾದಿ ಸೊಸೈಟಿಯು ದಿನಾಂಕ 30-03-2016 ರಂದು ರೂ.6,15,000/- ಮಂಜೂರು ಮಾಡಿದ್ದು, ಸದರಿ ಸಾಲವನ್ನು ಬಡ್ಡಿ ಸಮೇತ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡಿದ್ದು, ಅದರೆ ನೀವು ಸಾಲವನ್ನು ಮರುಪಾವತಿಸದೇ ಇದ್ದು, ಫಿರ್ಯಾದಿಯವರು ಹಣವನ್ನು ಮರು ಪಾವತಿಸಲು ಆರೋಪಿತರಾದ ನಿಮ್ಮನ್ನು ಸೊಸೈಟಿಗೆ ಕರೆದು ಕೇಳಿದಾಗ ನೀವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಾರವಾರ ಶಾಖೆಗೆ ಸಂಬಂಧಪಟ್ಟ ಚೆಕ್ ನಂ.579251 ನ್ನು ದಿನಾಂಕ 19-08-2021 ರೂ.3,84,000/- ಎಂದು ನಮೂದಿಸಿ ನೀಡಿದ್ದು, ಫಿರ್ಯಾದಿಯವರು ಸದರಿ ಚೆಕ್‌ನ್ನು ನಗದಿಕರಿಸಲು ಕೆ.ಡಿ.ಸಿ.ಸಿ. ಬ್ಯಾಂಕ್, ಕಾರವಾರ ಶಾಖೆಗೆ ಸಲ್ಲಿಸಿದಾಗ ಸದರಿ ಬ್ಯಾಂಕಿನವರು "Funds insufficient" ಎಂಬ ಹಿಂಬರಹವನ್ನು ನೀಡಿದ್ದು, ತಕ್ಷಣವೇ ಫಿರ್ಯಾದುದಾರರು ಆರೋಪಿತರಾದ ನಿಮ್ಮನ್ನು ಸಂಪರ್ಕಿಸಿ ನೀವು ನೀಡಿದ ಚೆಕ್ ಬೌನ್ಸ್ ಆಗಿರುವ ಬಗ್ಗೆ ತಿಳಿಸಿದ್ದು, ನೀವು ಫಿರ್ಯಾದುದಾರಿಗೆ ಸದರಿ ಚೆಕ್ ನ್ನು ಮತ್ತೊಮ್ಮೆ ನಗಧಿಕರಣಕ್ಕಾಗಿ ಸಲ್ಲಿಸಲು ಹೇಳಿದ್ದು, ಪುನಃ ಫಿರ್ಯಾದುದಾರರು ಸದರಿ ಚೆಕ್ ನ್ನು ಮತ್ತೊಮ್ಮೆ ಬ್ಯಾಂಕ್‌ಗೆ ಹಾಜರುಪಡಿಸಿದ್ದು, ಆಗಲೂ ಸಹ ಬ್ಯಾಂಕಿನವರು ದಿನಾಂಕ 30-09-2021 ರಂದು "Funds Insufficient" ಎಂಬ ಹಿಂಬರಹ ನೀಡಿದ್ದು, ನಂತರ ದಿನಾಂಕ 14-10-2021 ರಂದು ಫಿರ್ಯಾದಿಯ ನೋಟಿಸ್ಸು ತಲುಪಿದ 15 ದಿನಗೊಳಗಾಗಿ ಹಣವನ್ನು ಮರುಪಾವತಿಸಲು ಕೇಳಿಕೊಂಡಿದ್ದು, ಸದರಿ ನೋಟಿಸ್ಸನ್ನು ನೀವು ದಿನಾಂಕ 16-10-2021 ರಂದು ಸ್ವೀಕರಿಸಿದ್ದರೂ ಸಹ, ಚೆಕ್ಕಿನ ಹಣವನ್ನು ಫಿರ್ಯಾದಿಗೆ ಹಿಂದಿರುಗಿಸದೇ ಇರುವ ಕಾರಣಕ್ಕಾಗಿ ನೀವು 138 ನೆಗೋಷಿಯೇಬಲ್ ಇನ್ಸ್ಟುಮೆಂಟ್ ಆಕ್ಟ್ ಅಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧ ಎಸಗಿರುವಿರಿ ಎಂದು ಆಪಾದಿಸಲಾಗಿದೆ.

ಪ್ರಶ್ನೆ: 1 ಈಗ ಓದಿ ಹೇಳಿದ ಆಪಾದನೆ ಕೇಳಿ ತಿಳಿಯಿತೇ?

ಉತ್ತರಃ

ಪ್ರಶ್ನೆ: 2 ಈಗ ಓದಿ ಹೇಳಿದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗ ಬಯಸುತ್ತೀರೋ?

ಉತ್ತರಃ

(ಆಪಾದನೆಗಳನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು )

ಕಾರವಾರ<br>
ದಿಃ 20-08-2025

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು<br>
ಕಾರವಾರ.